## ಪತ್ರಿಕಾ ಪ್ರಕಟಣೆ

ವಿಜಯನಗರ ಪದವಿ ಕಾಲೇಜು, ಹೊಸಪೇಟೆ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ ಕನ್ನಡ ವಿಭಾಗ ಮತ್ತು ಇಂಗ್ಲೀಷ್ ವಿಭಾಗ , ಹಳೇ ವಿದ್ಯಾರ್ಥಿಗಳ ಸಂಘ, ಕನ್ನಡ ವಿಶ್ವ ವಿದ್ಯಾಲಯ ಸಹಯೋಗದೊಂದಿಗೆ ದಿನಾಂಕ 03-04-2025 ಗುರುವಾರರಂದು ವಿಜಯನಗರ ಕಾಲೇಜಿನಲ್ಲಿ 'ಶೇಕ್‌ಸ್ಪಿಯರ್ ಮನೆಗೆ ಬಂದ' ಪುಸ್ತಕ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೃತಿಯ ಲೇಖಕರಾದ ಡಾ.ನಟರಾಜ್ ಹುಳಿಯಾರ್ ರವರು ಶೇಕ್ ಸ್ಪಿಯರ್ ಲೋಕದ ಬಗ್ಗೆ ಉಪನ್ಯಾಸ ನೀಡುತ್ತಾ ವಿದ್ಯಾರ್ಥಿಗಳ ಜೊತೆ ಸಂವಾದ ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಜಯನಗರ ಕಾಲೇಜಿನ ಪ್ರಾಚಾರ್ಯರಾದ ಡಾ.ಎಮ್.ಪ್ರಭುಗೌಡ ವಹಿಸಿದ್ದು ಅಧ್ಯಕ್ಷೀಯ ನುಡಿಗಳನ್ನು ನುಡಿದರು. ಡಾ.ಎಮ್.ಡಿ.ಪ್ರಶಾಂತ, ಅಧ್ಯಕ್ಷರು, ಹಳೇ ವಿದ್ಯಾರ್ಥಿಗಳ ಸಂಘ, ಕನ್ನಡ ವಿಶ್ವಿದ್ಯಾಲಯ, ಹಂಪಿ. ಡಾ. ಕೆ.ವೆಂಕಟೇಶ್, ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ಡಾ.ನಾರಾಯಣ ಹೆಬ್ಬೂರ್, ಪ್ರಾಚಾರ್ಯರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ. ವೇದಿಕೆ ಮೇಲೆ ಉಪಸ್ಥಿತರಿದ್ದರು. ಡಾ.ಬಸವರಾಜ್ ಟಿ.ಹೆಚ್., ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಿಟ್ನಾಳ್ ಇವರು ಸ್ವಾಗತಿಸಿದರು. ಡಾ.ಗಾದೆಪ್ಪ, ಮುಖ್ಯಸ್ಥರು, ವಿಜಯನಗರ ಕಾಲೇಜು ಇವರು ವಂದಿಸಿದರು. ವಿಜಯನಗರ ಕಾಲೇಜಿನ ಇಂಗ್ಲೀಷ್ ವಿಭಾಗದ ಮುಖ್ಯಸ್ಥರಾದ ಡಾ.ಸುಷ್ಮ ಹೂಗಾರ್ , ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ನಾಗಣ್ಣ ಕಿಲಾರಿ, ಇಂಗ್ಲೀಷ್ ವಿಭಾಗದ ಮುಖ್ಯಸ್ಥರಾದ ಡಾ.ವೀರೇಂದ್ರ ಪಾಟೀಲ್, ಹಾಗೂ ಉಭಯ ಕಾಲೇಜಿನ ಬೋಧಕ ಹಾಗೂ ಬೊಧಕೇತರ ಸಿಬ್ಬಂದಿ, ಹಳೇ ವಿದ್ಯಾರ್ಥಿಗಳ ಕನ್ನಡ ವಿಶ್ವವಿದ್ಯಾಲಯದ ಹಳೇ ವಿದ್ಯಾರ್ಥಿಗಳು, ವಿಜಯನಗರ ಕಾಲೇಜು ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಂದನೆಗಳೊಂದಿಗೆ, ದಯವಿಟ್ಟು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ.

PRINCIPAL
VIJAYANAGARA COLLEGE
HOSPET – 583 201